CW.3 PW.3

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1494/2017

| | |
|---|---|
| ಸಾಕ್ಷಿದಾರರ ಹೆಸರು | ಲಿಂಗಮ್ಮ |
| ಗಂಡನ ಹೆಸರು | ಕರಿಯಪ್ಪ |
| ವಯಸ್ಸು | 58 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ಬನ್ನಿಕುಪ್ಪೆ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 22.07.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿಯನ್ನು ನೋಡಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಚಾಸಾ-1, 2, 4 ರಿಂದ 8 ಪರಿಚಯ ಇರುತ್ತದೆ.

ಸುಮಾರು 8 ವರ್ಷದ ಹಿಂದೆ ಶುಕ್ರವಾರದಂದು ನಾವು ಹಾರೋಹಳ್ಳಿ ಕಡೆಯಿಂದ ಕನಕಪುರಕ್ಕೆ ಬರುತ್ತಿದ್ದೆವು. ನನ್ನ ಮಗಳು ಸ್ಕೂಟಿಯನ್ನು ಓಡಿಸುತ್ತಿದ್ದು ಅದರಲ್ಲಿ ಬರುತ್ತಿದ್ದೇವು. ಸರ್ಕಾರಿ ಬಸ್ ಬಂದು ನಮ್ಮನ್ನು ಗುದ್ದಿ ಅಲ್ಲಿಂದ ಸೀದಾ ಹೋರಟು ಹೋಗಿರುತ್ತದೆ. ಆ ಸಮಯದಲ್ಲಿ ನನ್ನ ಸೊಂಟಕ್ಕೆ ಕೈ ಕಾಲುಗಳಿಗೆ ಏಟು ಬಿದ್ದಿರುತ್ತದೆ. ನನ್ನ ಮಗಳಿಗೂ ಏಟಾಗಿರುತ್ತದೆ. ನಂತರ ಕನಕಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಸಂಜಯ್‌ಗಾಂಧಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿಂದ ಚಿಕಿತ್ಸೆಗಾಗಿ ಕೆಂಪೇಗೌಡ ಆಸ್ಪತ್ರೆಗೆ ಹೋದೆವು. ಅಲ್ಲಿ ಚಿಕಿತ್ಸೆ ಆಗಲಿಲ್ಲ ಎಂದು ಸೇವಾಕ್ಷೇತ್ರ ಆಸ್ಪತ್ರೆಗೆ

ಹೋದೆವು. ನಂತರ ನನಗೆ ಚಿಕಿತ್ಸೆ ಪಡೆದುಕೊಂಡು ಜ್ಞಾನ ಬಂದಿರುತ್ತದೆ. ನಾನು ಈ ಸಂಬಂಧ ಹೇಳಿಕೆ ಕೊಟ್ಟಿರುತ್ತೇನೆ. ನಾನು ಬಸ್ ನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಗೆ ಸದರಿ ಬಸ್ಸಿ ನ ಒಂದು ಛಾಯಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ. ನನ್ನ ಮಗಳ ಗಾಡಿಯನ್ನು ನೋಡಿದರೆ ಗುರುತಿಸುತ್ತೇನ್ನೆ ಸಾಕ್ಷಿಗೆ ಸದರಿ ಪ್ರಕರಣದ ಹೊಂಡಾ ಆಕ್ಟೀವಾ ವಾಹನದ 2 ಛಾಯಾಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಈಗಾಗಾಲೇ ನಿಪಿ-4 ಮತ್ತು 5 ಎಂದು ಗುರುತಿಸಲಾಗಿರುತ್ತದೆ.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸ. ಸ. ಅ. ರವರಿಂದ**

ದಿನಾಂಕ 08.09.2017 ರಲ್ಲಿ ಸದರಿ ಅಪಘಾತವಾಗಿರುತ್ತದೆಂದರೆ ಸರಿ. ಆಗ 10.15 ಗಂಟೆ ಸಮಯದಲ್ಲಿ ನನ್ನ ಮಗಳು ಹೊಂಡಾ ಆಕ್ಟೀವಾ ಸಂಖ್ಯೆ ಕೆಎ-42-ಡಬ್ಲೂಲ್ಯ-1339 ಸದರಿ ವಾಹನವನ್ನು ಓಡಿಸುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ ಕೆಎ-42-ಎಫ್ 610 ಇದು ನನ್ನ ಮಗಳು ಚಲಾಯಿಸುತ್ತಿದ್ದ ವಾಹನಕ್ಕೆ ಡಿಕ್ಕಿ ಹೊಡೆಸಿರುತ್ತದೆಂದರೆ ಸರಿ. ನಾನು ಪೋಲೀಸರಿಗೆ ಸದರಿ ಅಪಘಾತವು ಆರೋಪಿಯ ವೇಗದ ಹಾಗೂ ಅಜಾಗರೂಕತೆಯ ಚಾಲನೆಯಿಂದ ಆಗಿರುತ್ತದೆಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾವು ಸದರಿ ದಿನ ಮನೆಯಿಂದ ಯಾವ ಸಮಯಕ್ಕೆ ಹೊರಟಿರುತ್ತೇವೆಂದರೆ ಗೊತ್ತಿಲ್ಲ. ನನ್ನ ಮಗಳ ಬಳಿ ಡಿ ಎಲ್ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ನಾನು ನನ್ನ ಮಗಳು ಇಬ್ಬರು

ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸಾಕ್ಷಿಯು ನಾನು ಧರಿಸಿರಲಿಲ್ಲ ನನ್ನ ಮಗಳು ಧರಿಸಿದ್ದರು ಎಂದು ನುಡಿಯುತ್ತಾರೆ. ಸದರಿ ವಾಹನವನ್ನು ನಾವು ಕೊಂಡು 3 ತಿಂಗಳಾಗಿರಬಹುದು. ಇದಕ್ಕು ಮುಂಚೆ ನನ್ನ ಮಗಳು ವಾಹನ ಓಡಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಬಂದಾಗ 10.15 ಆಗಿತ್ತು. ಸದರಿ ದಿನ ಸದರಿ ಸ್ಥಳದ ರಸ್ತೆ ಅಗಲಿಕರಣದ ದುರುಸ್ತಿ ನಡೆಯುತ್ತಿದ್ದವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಎರಡು ಕಡೆ ಸಾಗುವ ವಾಹನಗಳು ಒಂದೇ ರಸ್ತೆಯಲ್ಲಿ ಹೋಗುತ್ತಿದ್ದವು ಎಂದರೆ ಸರಿಯಲ್ಲ.

ನಾವು ಮುಂದೆ ಸಾಗುತ್ತಿದ್ದಾಗ ನಮ್ಮ ಹಿಂದೆ ಯಾವ ವಾಹನ ಬರುತ್ತಿತ್ತು ಎಂದು ನಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಬಸ್ ಬರುತ್ತಿರುವುದು ಗೊತ್ತಿತ್ತು ಎಂದು ನುಡಿಯುತ್ತಾರೆ. ಸದರಿ ಬಸ್ ನಮ್ಮ ಗಾಡಿಗೆ ಬಲಭಾಗಕ್ಕೆ ಹೊಡೆದಿರುತ್ತದೆ. ಅದು ಯಾವ ಕಡೆ ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ನಾನು ಬಿದ್ದಾಗ ನನಗೆ ಸ್ವಲ್ಪ ಜ್ಞಾನ ಹೋಗಿರುತ್ತದೆ. ನನಗೆ ಆ ಸಮಯದಲ್ಲಿ ನನ್ನನ್ನು ಯಾರು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಗೊತ್ತಿರುವುದಿಲ್ಲಎಂದರೆ ಸಾಕ್ಷಿಯು ನಂತರ ಸುಮಾರಾಗಿ ಗೊತ್ತಾಯಿತು ಎಂದು ನುಡಿಯುತ್ತಾರೆ. ಸದರಿ ಬಸ್ ಚಾಲಕನನ್ನು ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿದ್ದು ಈ ಹಿಂದೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಸರಿಯಾಗಿ ಗಾಡಿ ಓಡಿಸಲು ಬಾರದೇ ಇರುವ ಕಾರಣ ಆಕೆಯೇ ಆಯತಪ್ಪಿ ಬಿದ್ದಿದ್ದು ನಮಗಿಬ್ಬರಿಗೂ ಗಾಯಗಳಾಗಿರುತ್ತವೆ. ಇದರಲ್ಲಿ ಬಸ್ ನ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ.

ನಾವು ಪರಿಹಾರ ಕೋರಿ ಅರ್ಜಿ ಹಾಕಿರುತ್ತೇವೆಂದರೆ ಸರಿ. ಸದರಿ ದಿನ ನಾವಾಗಿಯೇ ಬಿದ್ದು ಗಾಯ ಪಡಿಸಿಕೊಂಡಿರುತ್ತೇವೆ ಅದೇ ರಸ್ತೆಯಲ್ಲಿ ಬರುತ್ತಿದ್ದ ಸದರಿ ಬಸ್ ನ ಮೇಲೆ ಸುಳ್ಳು ಆರೋಪ ವಹಿಸಿ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸದರಿ ಪ್ರಕರಣ ದಾಖಲು ಮಾಡಿರುತ್ತೇವೆಂದರೆ ಸರಿಯಲ್ಲ. ಆರೋಪಿಯು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

CW.3 PW.3

ಮರುವಿಚಾರಣೆಃ ಇರುವುದಿಲ್ಲ

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**